International Journal of Kannada Research
www.kannadajournal.com

**ISSN: 2454-5813**
IJKR 2023; 9(2): 183-186
© 2023 IJKR
www.kannadajournal.com
Received: 16-05-2023
Accepted: 20-06-2023

**ಡಾ. ಕೆ.ಸೌಭಾಗ್ಯವತಿ**
ಕನ್ನಡ ಪ್ರಾಧ್ಯಾಪಕರು, ವಿಭಾಗದ ಮುಖ್ಯಸ್ಥರು, ಮತ್ತು ಮಾರ್ಗದರ್ಶಕರು, ಮೈಸೂರು ವಿಶ್ವವಿದ್ಯಾನಿಲಯ ಸಂಜೆ ಕಾಲೇಜು, ಮೈಸೂರು, ಕರ್ನಾಟಕ, ಭಾರತ

**Corresponding Author:**
**ಡಾ. ಕೆ.ಸೌಭಾಗ್ಯವತಿ**
ಕನ್ನಡ ಪ್ರಾಧ್ಯಾಪಕರು, ವಿಭಾಗದ ಮುಖ್ಯಸ್ಥರು, ಮತ್ತು ಮಾರ್ಗದರ್ಶಕರು, ಮೈಸೂರು ವಿಶ್ವವಿದ್ಯಾನಿಲಯ ಸಂಜೆ ಕಾಲೇಜು, ಮೈಸೂರು, ಕರ್ನಾಟಕ, ಭಾರತ

# ಆಧುನಿಕ ಕಾಲದಲ್ಲಿ ಜಾನಪದದ ಪ್ರಸ್ತುತತೆ

**ಡಾ. ಕೆ.ಸೌಭಾಗ್ಯವತಿ**

**ಪೀಠಿಕೆ**

ಭಾರತ ದೇಶ ಅನೇಕ ಸಂಸ್ಕೃತಿಗಳ, ಬಹು ಭಾಷೆ, ಭಿನ್ನ ಭಿನ್ನ ಧರ್ಮಗಳ ತವರು ಮನೆ. ಆ ಹಿನ್ನೆಲೆಯಲ್ಲಿ ಭಾರತವನ್ನು 'ಸರ್ವಧರ್ಮಗಳ ಸಮನ್ವಯ ರಾಷ್ಟ'ವೆಂದು ಕರೆಯುವುದು. ಅಂತೆಯೇ ಕರ್ನಾಟಕ ಕೂಡ ಈ ಮಾತಿಗೆ ಹೊರತಾಗಿಲ್ಲ, ಇದು ಬುಡಕಟ್ಟು, ಅಲೆಮಾರಿ, ವೃತ್ತಿಯಾಧಾರಿತ ಹಿಂದುಳಿದ ಸಮುದಾಯಗಳನ್ನು ತನ್ನ ಒಡಲಲ್ಲಿ ಅಡಗಿಸಿಕೊಂಡಿದೆ. ಭಾರತೀಯ ಸಮಾಜ ಜಾತಿಯಾಧಾರಿತವಾದುದು. ತನ್ನದೇ ಆದ ವಿಶಿಷ್ಟ ನಂಬಿಕೆ, ಸಂಪ್ರದಾಯ, ಆಚರಣೆ, ಆಹಾರ, ಪಾನೀಯ, ವಸತಿ, ನೆಲೆ, ನ್ಯಾಯ, ಕಟ್ಟುಪಾಡುಗಳಿಂದಾಗಿ ತನ್ನದೇ ಆದ ವಿಶಿಷ್ಟ ಸಂಸ್ಕೃತಿಯನ್ನು ಕಾಪಾಡಿಕೊಂಡು ಬರುತ್ತಿರುತ್ತದೆ.

ಜಾನಪದ ಕ್ಷೇತ್ರ ಆಗಸದಷ್ಟು ವಿಸ್ತಾರ, ಸಮುದ್ರದಷ್ಟು ಆಳ, ಭೂಮಿಯಷ್ಟು ವಿಶಾಲತೆ ಹೊಂದಿರುವಂತಹುದು. ಎಲ್ಲರಿಗೂ ಸಲ್ಲುವ, ಎಲ್ಲರಿಗೂ ಇಷ್ಟವಾಗುವ ವಸ್ತು ವಿಷಯ ಅದಾಗಿದೆ. ಹಾಗಾಗಿ ಅದು ವಿಶ್ವ ವ್ಯಾಪಿಯಾಗಿ ಸಂಚರಿಸುತ್ತದೆ. ಜಾನಪದ ನಿತ್ಯವೂ ಬೆಳೆಯುತ್ತಾ, ಬದಲಾವಣೆಗೊಳ್ಳುತ್ತಾ ತನ್ನ ಹರುಹನ್ನು ವಿಸ್ತರಿಸಿಕೊಳ್ಳುವತ್ತಾ ಸಾಗಿದೆ. ಜನಪದ ಸಾಹಿತ್ಯ ವಿವಿಧತೆಯಲ್ಲಿ ಏಕತೆಯನ್ನು ಹೊಂದಿದೆ. ಅದನ್ನು ಸಂಕ್ಷಿಪ್ತವಾಗಿ ಅಧ್ಯಯನ ಮಾಡುವುದಕ್ಕಿಂತ, ಸಂಕೀರ್ಣವಾಗಿ ಅಧ್ಯಯನ ಮಾಡುವುದು ಹೆಚ್ಚು ಸೂಕ್ತ. ದಿನದಿಂದ ದಿನಕ್ಕೆ ಜನಪದದ ಪರಿಕಲ್ಪನೆಗಳು ಬದಲಾವಣೆಗೆ ಒಳಗಾಗುತ್ತಿವೆ.

ಜನಪದ ಸಂಸ್ಕೃತಿ ಎಂಬುದು ಮುಚ್ಚಿಟ್ಟ ಸಂಪಿಗೆಯಂತೆ ಘಮಘಮಿಸುತ್ತಿದೆ. ಜನಪದ ಸಾಹಿತ್ಯದ ಅಧ್ಯಯನ ಬಹುಮುಖ್ಯ ನೆಲೆಯೊಳಗೆ ಗುಪ್ತಗಾಮಿನಿಯಂತಿದೆ. ಪ್ರಕೃತಿ ಆರಾಧಕರಾದ ಮನುಷ್ಯರು ಯಾವುದೇ ಒಂದು ಸಮುದಾಯದೊಳಗೆ ಮಿಳಿತವಾದಾಗ, ಸಹಜವಾಗಿ ತಮ್ಮದೇ ಆದ ಆಚಾರ-ವಿಚಾರ, ರೂಢಿ-ಸಂಪ್ರದಾಯ, ಉಡುಗೆ-ತೊಡುಗೆ, ಧಾರ್ಮಿಕತೆ, ಆಚರಣೆ ಮೊದಲಾದುವುಗಳನ್ನು ಅಭ್ಯಾಸ ಮಾಡಿಕೊಂಡಿರುತ್ತದೆ. ಹಲವಾರು ಹಳ್ಳಿಗಳಿಂದ, ವಿವಿಧ ಕಾರಣಗಳಿಂದ ಬಂದು ನೆಲೆಯೂರಿದ ಜನ ಸಮುದಾಯದ ಬದುಕೆ ವೈವಿಧ್ಯಮಯವಾದುದು. ಅವರ ಕಸುಬು, ಕಲೆ, ಪ್ರದರ್ಶನ, ಸಾಹಿತ್ಯ, ಮನೆಗಳ ಮಾದರಿ, ಜಾನಪದ ಸಾಹಿತ್ಯ ಸಾಕಷ್ಟು ಸಮೃದ್ಧವು ವೈವಿಧ್ಯಮಯವೂ ಆಗಿದೆ.

19ನೇ ಶತಮಾನದ ಕೈಗಾರಿಕಾ ಕ್ರಾಂತಿ ಬಹಳಷ್ಟು ಉದ್ಯೋಗವಕಾಶಗಳನ್ನು ನಗರದಲ್ಲಿ ಸ್ಥಾಪಿಸಿತು. ಇದರಿಂದ ಆಕರ್ಷಿತರಾದ ಹಳ್ಳಿಗಾಡಿನ ಜನತೆ ನಗರದತ್ತ ಮುಖ ಮಾಡಿದರು ತಾವು ನಗರಕ್ಕೆ ಬರುವುದರೊಂದಿಗೆ ಅವರು ಗ್ರಾಮೀಣ ಪರಿಸರದ ಜಾನಪದೀಯ ಸೊಗಡಿನ ಜೀವನವನ್ನು ನಗರಕ್ಕೆ ತಂದರು. ಜಾನಪದದಲ್ಲಿ ನಾಗರಿಕತೆಗೆ ಬರವಿಲ್ಲ. ಇದರಲ್ಲಿ ಜಾನಪದ ಪ್ರಕಾರಗಳನ್ನು ಬಹಳ ಸೂಕ್ಷ್ಮವಾಗಿ ಹುಡುಕಿ ತೆಗೆಯಬೇಕಾಗಿದೆ.

21ನೇ ಶತಮಾನವನ್ನು "ಮಾಹಿತಿಯುಗ" ಎಂದು ಕರೆಯುವರು. ಸಮೂಹ ಮಾಧ್ಯಮಗಳು ಈ ಯುಗದ ಕೇಂದ್ರ ಬಿಂದು. ಪ್ರಸ್ತುತ ತಂತ್ರಜ್ಞಾನವು ಸಮೂಹ ಮಾಧ್ಯಮಗಳ ಸ್ವರೂಪವನ್ನೇ ಬದಲಾಯಿಸಿವೆ. ಪ್ರಸ್ತುತ ಜಾನಪದದಲ್ಲಿ ಜನಪದ ಭಾಷೆ, ಶೈಲಿ, ಸಾಹಿತ್ಯ, ಆಚರಣೆ ಹಾಗೂ ಸಾಂಸ್ಕೃತಿಕತೆಯಲ್ಲಿ ಸಾಮಾಜಿಕ ಬದಲಾವಣೆ ಇದ್ದು ಮುಖಾಮುಖಿ ಸಂವಹನಕ್ಕೆ ಇದು ಅಣಿಯಾಗುತ್ತದೆ. ಜನಪದಕ್ಕೆ ತನ್ನದೇ ಆದ ಮೂಲಭೂತ ಗುಣವಿದೆ ಜಾನಪದದಲ್ಲಿ ಬದಲಾವಣೆ ಆಶಿಸುವವರು, ಶುದ್ಧ ಜಾನಪದ ಗಿಟ್ಟಿಸುವುದಕ್ಕಾಗಿ ಅವಕಾಶವಾದಿಗಳಾಗಿರುವವರು. ನಕಲಿ ಜನಪದದಿಂದ ನಿಜವಾದ ಕಲಾವಿದರ ಹಿತಾಸಕ್ತಿಗೆ ತೀವ್ರ ಧಕ್ಕೆ ಉಂಟಾಗುತ್ತಿದೆ.

ಒಂದು ಜನ ಸಮುದಾಯದ ಜೀವನ ವಿಧಾನವೇ ಜಾನಪದವಾಗಿದೆ. ಜನಪದ ಏಕಶಿಲಾ ಕೃತಿ ಸ್ವರೂಪದ್ದಲ್ಲ. ಅದರ ಒಳ ಆವರಣದಲ್ಲಿ ಅನೇಕ ಉಪಪ್ರಭೇದಗಳು, ಮೂಲ ಸಂಸ್ಕೃತಿಗಳು ಹಾಸುಹೊಕ್ಕಾಗಿವೆ. ಹೀಗೆ ಅನಂತ ಮುಖಗಳನ್ನು, ಅನೇಕ ಆಯಾಮಗಳನ್ನು ಜನಪದ ತನ್ನ ಗರ್ಭದಲ್ಲಿ ರಕ್ಷಿಸಿ ಇಟ್ಟುಕೊಂಡಿದೆ. ಜನಪದ ಸಂಸ್ಕೃತಿ ಮಾತಿನ ಪರಂಪರೆಯದು. ಅದು ವ್ಯಕ್ತಪಡಿಸುವ ಆಶಯಗಳು ಅದರ ಮೌಲ್ಯಗಳು ಬೇರೆ ಬೇರೆಯಾಗಿವೆ.

ಗ್ರಾಮೀಣ ಜನರ ಧ್ವನಿಯಾಗಿ, ಅನುಭವದ ಅಮೃತವಾಗಿ ಹೊರಹೊಮ್ಮಿದ ಅದ್ಭುತ ಸಾಹಿತ್ಯ ಜಾನಪದ. ಕಾಲಕ್ಕೆ ತಕ್ಕಂತೆ ಜಾನಪದದ ಪರಿಕಲ್ಪನೆ ಬದಲಾಗುತ್ತಾ ಬಂದಿದೆ. ಈ ಅವಧಿಯಲ್ಲಿ ಹೊಸ ಹೊಸ ಜಾನಪದಗಳು ಮೈದಾಳಿವೆ. ಜಾನಪದ ತಂತ್ರಜ್ಞಾನದಲ್ಲಿ ಮೂಲ ಸಂಸ್ಕೃತಿಯ ಹುಡುಕಾಟ ಗೌಪ್ಯವಾಗಿರುತ್ತದೆ. 'ದೇಸಿ' ಎಂಬುದು ಜನಪದರ ಒಂದು ಜೀವನ ಕ್ರಮವಾಗಿದೆ. ಇಂದಿನ ಜೀವನವು ಸಂಕರದ ಉತ್ಪನ್ನವಾಗಿದೆ. ಮಾತೃವಂಶ ಕುಟುಂಬ ಪದ್ಧತಿ ಇದ್ದ ಸಮಾಜದ ರಚನೆಯನ್ನು ಪಿತೃವಂಶದ ಕುಟುಂಬ ಪದ್ಧತಿ ಒಡೆದಿದೆ.

ಒಂದು ದೇಶದ ಮೂಲ ಸಂಸ್ಕೃತಿಯ ಬೇರು ಜಾನಪದದ ಭಾವನೆಯಾಗಿದೆ. ಸರಳವಾದ ಸಾಹಿತ್ಯ ಅದರ ಬಹುದೊಡ್ಡ ಸಂಪತ್ತು. ಜನಪದ ಕಲೆಗಳಲ್ಲಿನ ಪ್ರಮುಖ ಪ್ರಕಾರಗಳೆಂದರೆ ಜನಪದ ಗೀತೆ, ಕುಣಿತ, ನಾಟಕ, ಹರಿಕಥೆ, ಬೀದಿನಾಟಕ, ಸೂತ್ರದ ಗೊಂಬೆಯಾಟ, ಯಕ್ಷಗಾನ, ಗೀಗೀ ಪದ, ಲಾವಣಿ, ಮಾದೇಶ್ವರ, ಮಂಟೆಸ್ವಾಮಿ ಪದ, ಒಗಟು, ಗಾದೆ ಮೊದಲಾದ ಪ್ರದರ್ಶಕ ಕಲೆಗಳನ್ನು ಸಮಾಜದ ಅಭಿವೃದ್ಧಿ ಸಂವಹನದ ಅಂಗವಾಗಿ ತಜ್ಞರು ಬಳಸಿಕೊಳ್ಳುತ್ತಿದ್ದಾರೆ.

**ಜನಪದ ಗೀತೆಗಳು**

ಜನಪದ ಗೀತೆಗಳು ಜನಪದರ ಜ್ಞಾನ ಭಂಡಾರಗಳೆನಿಸಿವೆ. ಭಾರತದ ಎಲ್ಲ ರಾಜ್ಯಗಳಲ್ಲೂ ಜನಪದ ಹಾಡುಗಳು ಪ್ರಚಲಿತದಲ್ಲಿವೆ. ಪ್ರಸ್ತುತ ದಿನಗಳಿಗೆ ಸಂಬಂಧಿಸಿದಂತೆ ಜನಸಂಖ್ಯಾ ನಿಯಂತ್ರಣ, ಗ್ರಾಮೀಣ ಅಭಿವೃದ್ಧಿ, ದೇಶೀಯತೆ, ರಾಷ್ಟ್ರೀಯತೆ, ಭಾವೈಕ್ಯತೆ, ಅಕ್ಷರ ಆಂದೋಲನ, ಆರೋಗ್ಯ ಮಹಿಳಾ ಶಿಕ್ಷಣ, ಗ್ರಾಮದ ನೈರ್ಮಲೀಕರಣ, ಜನಜಾಗೃತಿ, ಮೊದಲಾದ ಮನವೊಲಿಕೆಗಾಗಿ ಜಾನಪದ ಗೀತೆಗಳು ಬಳಕೆಯಾಗುತ್ತಿವೆ.

ನಗರದಲ್ಲಿ ವಿವಿಧ ಗುಂಪಿನ ವಿವಿಧ ಜಾತಿಯ ವರ್ಗದ ಪಂಗಡದ ವೃತ್ತಿಯ ಜನರಿರುತ್ತಾರೆ. ಅವರು ತಮ್ಮ ಗುಂಪಿನಲ್ಲಿ ಬಳಕೆಯಲ್ಲಿರುವ ಗೀತೆ, ಕಥೆ, ಗಾದೆ, ಒಗಟು, ಹಾಸ್ಯಗಳನ್ನು ಹೇಳಿಕೊಂಡು ಮನೋರಂಜನೆ ಪಡೆಯುತ್ತಾರೆ. ಹಿಂದಿನ ಜನಪದ ಗೀತೆಗಳಿಗೂ, ಪ್ರಸ್ತುತ ಜನಪದ ಗೀತೆಗಳಿಗೂ ಅಜಗಜಾಂತರ ವ್ಯತ್ಯಾಸಗಳಿರುವುದನ್ನು ನಾವು ಈ ಸಂದರ್ಭದಲ್ಲಿ ಗಮನಿಸಬಹುದು. ಇತ್ತೀಚಿನ ಜನಪದ ಗೀತೆಗೊಂದು ಉದಾಹರಣೆ ಕೊಡುವುದಾದರೆ–

"ನೋಡಲೇ ನಿನ್ನ ನೋಡಲೇ ಅಮ್ಮಯ್ಯ
ನಿನ್ನ ಅಳಿಯನ ನೋಡಲೇ ನೀ ನೋಡಲೇ
ಬಿ.ಎ ಪಾಸ್ ಮಾಡಿದನಂದು ಬೀಗರು ಬಂದು ಹೇಳಿದರಲ್ಲ
ಬಿ.ಎ ಪಾಸು ಮಾಡಲಿಲ್ಲ ಬೀದಿ ಬೀದಿ ತಿರುಗುವನಲ್ಲ"

ಪ್ರತಿ ಕಾಲಘಟ್ಟದಲ್ಲೂ ಜಾನಪದ ಎಂದರೆ ಹಳೆಯ ಸರಕು ಎಂದು ಒಂದು ಉಪೇಕ್ಷಿತ ನಿಲುವು ಬಹಳ ಹಿಂದಿನಿಂದಲೂ ಬಂದಿದೆ. ಆದರೆ ಬದಲಾಗುತ್ತಿರುವ ಕಾಲದಲ್ಲಿ ಜನಪದರ ವಿಮೋಚನೆಯ ಅರಿವು ಜಾನಪದ ರೂಪದಲ್ಲಿ ಪ್ರಕಟಗೊಂಡಿರುವುದನ್ನು ಕಾಣಬಹುದು. ನಗರದ ತಂತ್ರಗಳನ್ನು, ಕಲಿತವರ ಆಕ್ರಮಣಕಾರಿ ಮನೋಭಾವದಿಂದಾಗಿ, ಸಾಂಪ್ರದಾಯಿಕ ಕಲೆಗಳು ಬೆಳೆದು ನಿಲ್ಲಲು ಕಷ್ಟವಾಗಿದೆ. ನಾವೆಲ್ಲರೂ ಕಂಪ್ಯೂಟರ್, ಮೊಬೈಲ್, ಟ್ವೀಟರ್, ಇನ್ಸ್ಟಾಗ್ರಾಂ ಸಂಸ್ಕೃತಿಯಲ್ಲಿ ಇದ್ದೇವೆ. ಇದನ್ನು ಪ್ರಸ್ತುತ ಸಂಸ್ಕೃತಿಯ ಪ್ರಭಾವ ಎಂದು ಕರೆಯಲಾಗುತ್ತಿದೆ. ಇದರಿಂದ ಪುರಾತನ ಗ್ರಾಮೀಣ ಜಾನಪದ ಸಂಸ್ಕೃತಿ ಮೂಲೆಗುಂಪಾಗುತ್ತಿದೆ.

**ಜನಪದ ಕಥೆಗಳು**

ಬಹಳ ಹಿಂದೆ ಕಥೆ ಎಂದರೆ ಅಜ್ಜಿಯ ಕತೆ, ಹೂಂಗುಟ್ಟುವ ಕಥೆ, ದೀರ್ಘವಾದ ಕಥೆ ಅನ್ನುವ ಒಂದು ನಂಬಿಕೆ ಇತ್ತು. ಆದರೆ ಪ್ರಸ್ತುತ ದಿನಗಳಲ್ಲಿ ಮೂರು ಸಾಲಿನಲ್ಲಿ ಒಂದು ಕಥೆಯನ್ನ ಮುಗಿಸುವಂತಹದ್ದನ್ನು ನಾವು ಕಾಣುತ್ತಾ ಇದ್ದೇವೆ. ಇದರೊಂದಿಗೆ ಪೋಸ್ಟ್ ಕಾರ್ಡಿನ ಕಥೆಗಳು ಕೂಡ ಬಳಕೆಯಲ್ಲಿರುವುದನ್ನು ನಾವಿಲ್ಲಿ ನೋಡಬಹುದು.

ಉದಾಹರಣೆಗೆ 3 ಸಾಲಿನ ಒಂದು ಕಥೆಯೆಂದರೆ– ಇಬ್ಬರು ಸಂಜೆಯ ಮಬ್ಬಲ್ಲಿ ದಾರಿಯಲ್ಲಿ ನಡೆದು ಹೋಗುತ್ತಿದ್ದರು. ಅವರಲ್ಲಿ ಒಬ್ಬ ಇನ್ನೊಬ್ಬನಿಗೆ ಕೇಳಿದ ನಿನಗೆ ದೆವ್ವಗಳ ಬಗ್ಗೆ ನಂಬಿಕೆ ಇದೆಯೇ! ಅದಕ್ಕೆ ಆತ ಇಲ್ಲ ಎಂದು ಹೇಳಿದ. ಆಮೇಲೆ ಪಕ್ಕಕ್ಕೆ ತಿರುಗಿ ನೋಡಿದರೆ ಜೊತೆಯಲ್ಲಿದ್ದ ದಾರಿಹೋಕ ಕಾಣೆಯಾಗಿದ್ದ.

ಮತ್ತೊಂದು ಹಾಸ್ಯ ಕಥೆ: ಒಬ್ಬ ರಾಜ ಮಾರ್ಗ ಮಧ್ಯದಲ್ಲಿ ತನ್ನಂತೆ ಇರುವ ವ್ಯಕ್ತಿ ಒಬ್ಬನನ್ನು ಕಂಡು ಚಕಿತಗೊಂಡು ಕೇಳಿದ. ನಿನ್ನ ತಾಯಿ ಏನಾದ್ರು ನಮ್ಮ ಅರಮನೆಯಲ್ಲಿ ಕೆಲಸಕ್ಕೆ ಇದ್ದರೆ, ಅದಕ್ಕೆ ಆ ವ್ಯಕ್ತಿ ಹೇಳಿದ ಇಲ್ಲ ನನ್ನ ತಂದೆ ತಮ್ಮ ಅಮ್ಮನ ಅಂತಪುರದಲ್ಲಿ ಕೆಲಸ ಮಾಡುತ್ತಿದ್ದರು.

**ಜನಪದ ನಂಬಿಕೆಗಳು**

ಈ ಜೀವ ಜಗತ್ತಿನಲ್ಲಿ ಜಾನಪದ ಪ್ರಭಾವಕ್ಕೆ ಒಳಗಾಗದೆ ಇರುವ ವ್ಯಕ್ತಿ ಬಹುಶಃ ಇಲ್ಲವೆಂದು ಧೈರ್ಯವಾಗಿ ಹೇಳಬಹುದು. ಭಾರತದಲ್ಲಿರುವ ಅನೇಕ ವಿಚಾರವಂತರು, ಸಾಮಾನ್ಯ ಜನರಂತೆ ಬೆಳಿಗ್ಗೆ ಹೇಳುವಾಗ ಬಲ ಮಗ್ಗುಲಲ್ಲಿ ಏಳುತ್ತಾರೆ. ಎಡ ಮಗ್ಗುಲಲ್ಲಿ ಎದ್ದರೆ, ತಮಗೇನಾದರೂ ಕೆಡಕಾಗುತ್ತದೆ ಎಂದು ಅವರು ಭಾವಿಸುತ್ತಾರೆ. ಬಹಳಷ್ಟು ಜನ ಇಂದಿಗೂ ಗೋಮಾತೆಯಲ್ಲಿ 33 ಕೋಟಿ ದೇವರುಗಳಿದ್ದಾರೆ ಎಂಬುದನ್ನು ನಂಬುತ್ತಾರೆ. ಆನೆಯಲ್ಲಿ ಅವರಿಗೆ ಗಣಪ ಕಾಣುತ್ತಾನೆ. ಮಂಗನಲ್ಲಿ ಅವರಿಗೆ ಹನುಮಂತ ಕಂಡುಬರುತ್ತಾನೆ.

ಬಹಳ ಹಿಂದೆ ಹೊಸದಾಗಿ ಮನೆ ಕಟ್ಟಿ ಅಲ್ಲಿ ವಾಸಕ್ಕೆ ಹೋಗುವ ಮುನ್ನ ಒಕ್ಕಲು ಹಾಕುವುದನ್ನು ಮಾಡುತ್ತಿದ್ದರು. ಅದರ ಮತ್ತೊಂದು ಹೆಸರು 'ರಾವು' ತೆಗೆಯುವುದು. ಇಲ್ಲಿ ಸಾಮಾನ್ಯವಾಗಿ ಬಲಿಯಾಗುವ ಪ್ರಾಣಿ ಆಡು, ಕುರಿ. ಇದಲ್ಲದೆ ಮನೆಯ ನಾಲ್ಕು ಮೂಲೆಗೂ ನಾಲ್ಕು ಕೋಳಿಗಳನ್ನು ಬಲಿ ಕೊಡುತ್ತಿದ್ದರು. ಆದರೆ ಇಂದು ಗೃಹಪ್ರವೇಶಕ್ಕೆ ಸತ್ಯನಾರಾಯಣ ಪೂಜೆ, ಗಣಪತಿ ಹೋಮಗಳನ್ನು ವೈದಿಕರ ಹಾಗೆ ಜನಪದರು ಮಾಡುತ್ತಿದ್ದಾರೆ.

ಹಿಂದೆ ಜನಪದರಲ್ಲಿ ಬಲಿಕೊಡುವ ಪದ್ಧತಿಯಿತ್ತು. ಸಾಮಾನ್ಯ ಅರ್ಥದಲ್ಲಿ 'ಬಲಿ' ಎಂದರೆ ದೇವರಿಗೆ ಅರ್ಪಿಸುವುದು ಎಂದು ಹೇಳಲಾಗುತ್ತದೆ. ಏನನ್ನು ಅರ್ಪಿಸುವುದು? ಎಂಬ ಪ್ರಶ್ನೆ ಬಂದಾಗ ಜೀವ ಹೊಂದಿರುವ, ಹಸಿಯಾಗಿರುವ, ಜೀವಂತವಾಗಿರುವ ಜೀವ ಒಂದನ್ನು ಎಡೆ ರೂಪದಲ್ಲಿಟ್ಟು ದೇವರಿಗೆ ಸಮರ್ಪಿಸುವುದು. ಸಾಮಾನ್ಯವಾಗಿ ಬಲಿಯಲ್ಲಿ ಎರಡು ವಿಧ. ಒಂದು ಸಾತ್ವಿಕ ಬಲಿ. ಮತ್ತೊಂದು ತಾಮಸ ಬಲಿ. ಸಾತ್ವಿಕ ಬಲಿಯಲ್ಲಿ ಮೇಲ್ವರ್ಗದ ಜನ ಬೂದುಕುಂಬಳಕಾಯಿ, ಹಣ್ಣು ಕಾಯನ್ನು ದೇವರಿಗೆ ಅರ್ಪಿಸಿದರೆ,

ತಾಮಸ ಬಲಿಯಲ್ಲಿ ಕೋಳಿ, ಕುರಿ, ಆಡು, ಮೇಕೆ, ಕೋಣವನ್ನು ಬಲಿಕೊಡುತ್ತಾರೆ.

**ನಿಸರ್ಗ/ಸಸ್ಯ ಜಾನಪದ**

ಜನಪದರಲ್ಲಿ ಸಸ್ಯಗಳಿಗೂ ಜೀವವಿದೆ. ಪ್ರಾಣಿಗಳಿಗೂ ಜೀವವಿದೆ. ಹಾಲು ಸಸ್ಯಹಾರ ಎನ್ನುವರು. ಆದರೆ ಹಾಲು ಯಾವುದೇ ಗಿಡಗಂಟೆಗಳಲ್ಲಿ ಹುಟ್ಟುವುದಿಲ್ಲ. ಹಸುವಿನ ಕೆಚ್ಚಲಿನಿಂದಲೇ ಹಾಲು ಬರುವುದು. ಹಸು ಪ್ರಾಣಿಯಲ್ಲವೇ! ಬಲಿ ದೇವರಿಗೆ ಕೊಡುವ ಕಾಣಿಕೆ ಎಂದು ಗ್ರಾಮೀಣ ಜನ ಪರಿಭಾವಿಸಿದ್ದಾರೆ. ದುಷ್ಟ ಶಕ್ತಿಯನ್ನು ಕೈವಶ ಮಾಡಿಕೊಳ್ಳಲು, ಇಲ್ಲವೇ ಮಾಟ-ಮಂತ್ರ, ವಶೀಕರಣ ಮಾಡಿಕೊಳ್ಳಲು, ಪರಿಸರವನ್ನು ಹತೋಟಿಯಲ್ಲಿಡಲು, ಭೂಮಿಗೆ, ಬೆಳೆಗಳಿಗೆ ಕೃತಜ್ಞತೆ ತೋರುವುದಕ್ಕೆ, ಭಯದ ನಿವಾರಣೆಗೆ, ರಥ ಚಕ್ರ ಗಳಿಗೆ, ಬರಡು ಭೂಮಿಗೆ, ಕೆರೆ, ಕೋಟೆ ಕೊತ್ತಲಗಳಿಗೆ ಬಲಿಯನ್ನು ಕೊಟ್ಟ ನಿದರ್ಶನಗಳನ್ನು ಹಿಂದಿನಿಂದಲೂ ಕಾಣುತ್ತಾ ಬಂದಿದ್ದೇವೆ. ಹಾಗಾಗಿ ಹಿಂದೆಲ್ಲಾ ನರಬಲಿ ಪದ್ಧತಿ ರೂಢಿಯಲ್ಲಿತ್ತು. ಈಗ ಅದು ಪ್ರಾಣಿ ಬಲಿಗಳಿಗೆ ಸೀಮಿತವಾಗಿರುವಂತಹುದು ಒಂದು ಸಮಾಧಾನದ ಸಂಗತಿ.

ಪ್ರಾಣಿ ಬಲಿ ಕೊಡುವ ಕ್ರಿಯೆಯಷ್ಟೇ ಕ್ರೂರವಾದುದು ಸಸ್ಯ ಸಂಕುಲವನ್ನು ನಾಶ ಮಾಡುವುದು ಎಂಬ ಭಾವನೆ ಜನಪದರಿಗಿತ್ತು. ಉದಾಹರಣೆಗೆ: ತೆಂಗಿನ ಮರದ ನಾಶ ಮಾಡಿದರೆ ಅದು ಮಾತೃ ಹತ್ಯೆಗೆ ಸಮವಾಗಿತ್ತು ಎಂದು ಹೇಳುತ್ತಿದ್ದರು. ವೃಕ್ಷಗಳಿಗೆಲ್ಲ ಜೀವವಿದೆ. ಹೂ ಕಿತ್ತರೆ, ಕೊಂಬೆ ಕಡಿದರೆ, ಮರಕ್ಕೆ ಮೊಳೆ ಬಡಿದರೆ ಅವುಗಳಿಗೆ ನೋವಾಗುತ್ತದೆ ಎಂದು, ಅವುಗಳೊಳಗೆ ಒಂದು ಬಗೆಯ ಭಾವನಾತ್ಮಕತೆಯನ್ನು ಬೆಳೆಸಿಕೊಂಡಿದ್ದರು. ವೃಕ್ಷಾರಾಧನೆ ಮೂಲ ಜನಪದರ ಧಾರ್ಮಿಕ ಆಚರಣೆಯಾಗಿತ್ತು. ಹಾಗಾಗಿ ಅವರು ಪರಿಸರವನ್ನು ಆಚರಣೆಯ ಮೂಲಕ ಜತನ ಮಾಡುತ್ತಿದ್ದರು. ಆದರೆ ಇಂದು ಎಲ್ಲವೂ ವ್ಯಾಪಾರೀಕರಣವಾಗುತ್ತಿದೆ.

**ಗಾದೆ ಮತ್ತು ಒಗಟುಗಳು**

ಗಾದೆಗಳಲ್ಲಿ, ಒಗಟುಗಳಲ್ಲಿ ಬಹಳಷ್ಟು ಬದಲಾವಣೆಗಳಾಗಿರುವುದನ್ನು ಇಂದಿನ ದಿನಗಳಲ್ಲಿ ನಾವು ಕಾಣಬಹುದಾಗಿದೆ.

ಉದಾಹರಣೆಗೆ: ದುಡ್ಡಿದ್ರೆ ಮೈಸೂರು; ಇಲ್ದಿದ್ರೆ ಮೈಚೂರು

ಮಕ್ಕಳ ಕರ್ಕೊಂಡು ಮಾರ್ಕೆಟ್‌ಗೆ ಹೋಗಬೇಡ
ಸಿಟಿಗೆ ಬಂದವಳು ಸಿನಿಮಾಕ್ಕೆ ಬರಲ್ವಾ ಇತ್ಯಾದಿ.

ಒಗಟು: ತಾಯಿ ಇನ್ನು ಹುಟ್ಟಿಲ್ಲ ಮಗ ಆಗ್ಲೇ ಮಹಡಿ ಮೇಲಿದ್ದಾನೆ. (ಹೊಗೆ)

ಒಂದು ಮರ ಎರಡು ರೀತಿ ಎಲೆಗಳು, ಅರ್ಧ ಕಪ್ಪು, ಅರ್ಧ ಬಿಳಿ (ರಾತ್ರಿ ಮತ್ತು ಹಗಲು)

**ಜನಪದದಲ್ಲಿನ ಬದಲಾವಣೆ**

ಜನಪದ ರೈತರು ದಿನನಿತ್ಯ ಬಳಸುತ್ತಿದ್ದ ಬೀಸುಕಲ್ಲು, ಒನಕೆ, ಒರಳು ಕಲ್ಲು ಮುಂತಾದವು ಮಾಯವಾಗಿ ಆ ಜಾಗಕ್ಕೆ ಮಿಕ್ಸಿ ಗ್ರೈಂಡರ್ ಮೊದಲಾದುವು ಬಂದಿವೆ. ಹಿಂದಿನ ಕೆಲಸಗಳಿಂದ ಜನಪದ ಮಹಿಳೆಗೆ ದೈಹಿಕ ವ್ಯಾಯಾಮಗಳಾಗುತ್ತಿದ್ದವು. ಪ್ರಸ್ತುತ ದಿನಗಳಲ್ಲಿ ಅವು ಕಣ್ಮರೆಯಾಗುತ್ತ ನಮ್ಮ ದಿನನಿತ್ಯದ ಕೆಲಸ ಮಾಡಲು ಕೂಲಿ ಆಳುಗಳನ್ನು ನೇಮಿಸಿಕೊಳ್ಳುತ್ತೇವೆ. ಮನೆಯಲ್ಲಿ ಮಾಡಲು ಕೆಲಸವಿಲ್ಲದೆ, ವಾಕಿಂಗ್, ಡ್ರಿಲ್, ಯೋಗ ಮಾಡುತ್ತೇವೆ. ಅಳುವುದನ್ನು, ನಗುವುದನ್ನು ಒಂದು ವ್ಯಾಯಾಮ ಎಂದು ಈ ಕಾಲದಲ್ಲಿ ನಂಬಿದ್ದೇವೆ.

ಪ್ರಸ್ತುತ ಜಾನಪದದಲ್ಲಿ ಪ್ರೇಮ, ಕಾಮ, ಪ್ರಚೋದನೆ, ಗೋಡೆ ಬರಹ, ಬೆಂಚಿನ ಬರವಣಿಗೆ, ಮೊದಲಾದುವು ಇಂದು ಜನಪದ ಸಾಹಿತ್ಯ ಎನಿಸಿವೆ. ಅವುಗಳನ್ನು 'ಜನಪದ ಶಾಸನಗಳು' ಎಂದು ಇತ್ತೀಚಿನ ವಿದ್ವಾಂಸರು ಕರೆಯುತ್ತಿದ್ದಾರೆ. ಯಾತ್ರಿಕರಣ, ನಗರೀಕರಣ, ಜಾಗತೀಕರಣ, ಉದಾರೀಕರಣ ಹಾಗೂ ಬಂಡವಾಳ ಶಾಹಿ ಸಂಸ್ಕೃತಿಯಲ್ಲಿ ನೈಜತೆಯ ದೇಸಿ ಸಂಸ್ಕೃತಿ ಮುಸಕಾಗುತ್ತಿದೆ. ಆಧುನಿಕತೆಯ ಭರಾಟೆಯಲ್ಲಿ ಜಾನಪದ ಸಂಸ್ಕೃತಿ ಡೋಲಾಯಮಾನವಾಗುತ್ತಿದೆ.

ವಿದ್ಯುತ್ ಕಂಬ ಎತ್ತುವ ಕಾರ್ಮಿಕರು ಶ್ರಮ ಕಡಿಮೆ ಮಾಡಿಕೊಳ್ಳಲು ಹೇಳುವ ಕೂಗು ಕೆಲಸವನ್ನು ಹಗುರ ಮಾಡುತ್ತದೆ. ಎತ್ತಿನ ಗಾಡಿಗೆ ಬದಲಾಗಿ ಟೈರ್ ಚಕ್ರದ ಗಾಡಿ ಬಂದಿದೆ. ಟೈರ್ ಚಕ್ರದ ಗಾಡಿಗೆ ಬದಲಾಗಿ ಟ್ರ್ಯಾಕ್ಟರ್ ಬಂದಿದೆ. ಹಾಗೆಯೇ ಶ್ರಮದಾಯಕ ಕೆಲಸ ಮಾಡುವ ಕಾರ್ಮಿಕರೆಲ್ಲಾ ಜನಪದ ಗೀತೆಗಳನ್ನು ಹಾಡುತ್ತಾ, ಕಥೆ ಹೇಳುತ್ತಾ, ಕೇಳುತ್ತಾ, ಮಾತು ಮಾತಿಗೂ ಗಾದೆ, ಒಗಟುಗಳನ್ನು ಹೇಳುತ್ತಾ ಜಾನಪದದ ಅಸ್ತಿತ್ವ ಉಳಿಯಲು ಕಾರಣಕರ್ತರಾಗಿದ್ದಾರೆ.

ಜಾನಪದ ಕಲೆ, ಸಂಸ್ಕೃತಿ ಉಳಿಯಬೇಕಾದರೆ ಅದಕ್ಕೆ ವ್ಯಾಪಕ ಪ್ರಚಾರ ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರಗಳಿಂದ ಸಿಗಬೇಕು. ಕೈಗಾರಿಕೆಗಳನ್ನು ಮುಚ್ಚಿದರೆ. ವಿದ್ಯುತ್ ಸ್ಥಾವರಗಳನ್ನು ನಿಲ್ಲಿಸಿದರೆ. ಅಣುಬಾಂಬ್‌ಗಳನ್ನು ನಾಶ ಮಾಡಿದರೆ, ಯಾವುದೇ ಹಾನಿ ಇಲ್ಲ. ಆದರೆ ಪ್ರಾಣಿ ಸಂಕುಲ, ಸಸ್ಯ ಸಂಕುಲಗಳನ್ನು ನಾಶಪಡಿಸಿದರೆ ಮನುಕುಲವು ನಾಶವಾಗುತ್ತದೆಂಬುದು ಕಟು ಸತ್ಯ.

ಭಾರತದಲ್ಲಿ ಮೊದಲು ಸೂರ್ಯ-ಚಂದ್ರ, ದೇವ-ದೇವಿಯರ ಚಿತ್ರಗಳ ಕೆತ್ತನೆ ಮಾಡುತ್ತಿದ್ದರು. ಬದಲಾಗುತ್ತಿರುವ ಕಾಲಘಟ್ಟದಲ್ಲಿ ಅವರು ಅದನ್ನು ನಿಲ್ಲಿಸಿ, ಹೂವಿನ ಚಿತ್ರಗಳನ್ನು ಬಿಡಿಸಲಾರಂಬಿಸಿದರು. ಕುಂಬಾರರು ತಮ್ಮ ಮೂಲ ವೃತ್ತಿಯೊಂದಿಗೆ ತುಸು ಬದಲಾವಣೆ ಮಾಡಿಕೊಂಡು, ಮಡಿಕೆಯ ಮೇಲೆ ಚೀನಿಯರಂತೆ ಅತ್ಯಾಕರ್ಷಕ ಚಿತ್ತಾರಗಳನ್ನು ಬರೆಯುತ್ತಿದ್ದಾರೆ.

ಸಾಮಾಜಿಕ ಪರಿಸ್ಥಿತಿಗೆ ಅನುಗುಣವಾಗಿ ಪ್ರದರ್ಶನ ಕಲೆಗಳು ಬದಲಾವಣೆಗೆ ಒಳಪಟ್ಟಿವೆ. ಇವು ಹೊಸ ಹೊಸ ಆವಿಷ್ಕಾರಗಳೊಂದಿಗೆ ಬಳಕೆಗೆ ಬರುತ್ತಿವೆ. ಹಳ್ಳಿಯ ಮುಗ್ಧರ ಮನದ ಭಾವನೆಗಳ ಜ್ಞಾನವಂತಿಕೆಯನ್ನು ಕಲಾತ್ಮಕವಾಗಿ ಸರಳೀಕರಿಸಿ ಅರ್ಥೈಸುವ ಕಲಾವಿದರು, ಅವರ ಪ್ರತಿಭೆ ವಿಶಿಷ್ಟವಾದದ್ದು. ಲೌಕಿಕ ಜ್ಞಾನಗಳಿಂದ ದೇಸಿಯ ಕಲಾಸಿರಿಯನ್ನು ಉಳಿಸಿಕೊಂಡಿರುವ ಮೂಲ ಧಾಟಿಯ ಜನಪದ ಕಲಾವಿದರನ್ನು 'ಸಾಮಾಜಿಕ ಬದಲಾವಣೆಯ ಕರ್ತೃಗಳು' ಎನ್ನಬಹುದು.

**ಜಾನಪದ ಅಧ್ಯಯನಗಳು**

ವಸ್ತುಸಂಗ್ರಹಾಲಯಗಳು ಪ್ರಸ್ತುತ ದಿನಗಳಲ್ಲಿ ಜನಪದದ ಜ್ಞಾನ ವಾಹಕಗಳಾಗಿ ಜಾನಪದ ಶೈಕ್ಷಣಿಕ ಸಾಹಿತ್ಯ ಭಂಡಾರದಂತೆ ಕೆಲಸ ಮಾಡುತ್ತಿವೆ. ಅವುಗಳ ಒಳಗೆ ಮೂಲ ಜಾನಪದ, ನಗರ ಜಾನಪದ, ಶಿಷ್ಟ ಜಾನಪದ, ಆಧುನಿಕ ಜಾನಪದ ಎಂದು ವಿಭಾಗಿಸಿ ಕೊಳ್ಳಲಾಗಿದೆ. "ಮನುಷ್ಯ ಎಷ್ಟೇ ವೈಚಾರಿಕ ಚಿಂತನೆ ಮಾಡಿದರು ಆತ ದೇವರು ಧರ್ಮಗಳಿಂದ ದೂರವಿರಲು ಆಗುತ್ತಿಲ್ಲ. ಹಬ್ಬ-ಹರಿದಿನ, ಜಾತ್ರೆ-ಉತ್ಸವಗಳಲ್ಲಿ ಅವನು ಅಥವಾ ಅವನ ಕುಟುಂಬ ಪಾಲ್ಗೊಳ್ಳುತ್ತದೆ. ಹಾಗಾಗಿ ನಗರಗಳ ಒಡಲಲ್ಲಿ ಸೇರಿ ಹೋದ ಗ್ರಾಮಗಳನ್ನು ನಗರ ಗ್ರಾಮಗಳೆಂದು ಗುರುತಿಸಿ ಅಧ್ಯಯನ ಮಾಡಬಹುದೆಂದು" ಡಾ. ಟಿ ಗೋವಿಂದರಾಜ್ ಅವರು ಹೇಳುತ್ತಾರೆ.

ಶ್ರೀಯುತ ನಾಗಭೂಷಣ್ ಬಗ್ಗನಡು ಎನ್ನುವವರು ಹಂಪಿ ಕನ್ನಡ ವಿಶ್ವವಿದ್ಯಾನಿಲಯಕ್ಕೆ ಸಲ್ಲಿಸಿರುವ ಪ್ರೌಢ ಮಹಾ ಪ್ರಬಂಧದ ಹೆಸರು 'ಆಧುನಿಕ ಜಾನಪದ'. ಅದರಲ್ಲಿ ಅವರು ನಗರ ಜಾನಪದ, ಆಡು ಮಾತಿನ ಜಾನಪದ, ಸಮೂಹ ಜಾನಪದ, ವಾಹನ ಜಾನಪದ, ಲಿಖಿತ ಜಾನಪದ, ಪರಿಸರ ಜಾನಪದ ಎಂದು ಎಂಟು ಅಧ್ಯಾಯ ಮಾಡಿಕೊಂಡು ಸಂಶೋಧನ ಮಹಾ ಪ್ರಬಂಧವನ್ನು ಬರೆದಿದ್ದಾರೆ. ಅವೆಲ್ಲವೂ ಈ ಕಾಲಕ್ಕೆ ಅಗತ್ಯವಾದ ಅನಿವಾರ್ಯವಾದ ಜಾನಪದಗಳಾಗಿವೆ ಎಂಬುದು ನಮ್ಮೆಲ್ಲರಿಗೂ ಮನವರಿಕೆಯಾಗಬೇಕು.

ಪ್ರಸ್ತುತ ದಿನಗಳಲ್ಲಿ ಅಂಬೇಡ್ಕರ್ ಜಾನಪದ ಒಂದಷ್ಟು ಸದ್ದು ಮಾಡುತ್ತಿದೆ. ಈ ಬಗ್ಗೆ ಅರುಣ್ ಜೋಳದ ಕೂಡ್ಲಗಿಯವರು ಅಂಬೇಡ್ಕರ್ ಜಾನಪದ ಎಂಬ ಲೇಖನದಲ್ಲಿ ಜಾನಪದವನ್ನು ವಿಭಿನ್ನವಾಗಿ ನಾವಿಂದು ಗ್ರಹಿಸಬೇಕಿದೆ. ಅಂಬೇಡ್ಕರ್ ಪ್ರತಿಮೆ ದೈವಾರಾಧನೆಯು ಒಂದು ಪ್ರಮುಖ ಆಚರಣೆಯಾಗಿದೆ. ಬಾಬಾ ಸಾಹೇಬರ ಪ್ರಮುಖ ಘಟನಾವಳಿಗಳೆಲ್ಲಾ ಜಾನಪದವೇ ಎಂದವರು ಹೇಳುತ್ತಾರೆ. ಡಾ.ಮೊಗಳ್ಳಿ ಗಣೇಶ್ ರವರು ಕೂಡ 'ಅಂಬೇಡ್ಕರ್ ಒಂದು ಜಾನಪದ ಕ್ರಾಂತಿ' ಎಂಬ ಲೇಖನದಲ್ಲಿ ಹೊಸ ಹೊಸ ಜನಪದ ಸ್ತರಗಳ ಬಗ್ಗೆ ವಿಶೇಷವಾಗಿ ಹೇಳಿದ್ದಾರೆ. ಜಾತ್ಯಾತೀತ ತತ್ವ, ಅಂಬೇಡ್ಕರ್ ಜಾನಪದದ ಸಾರ, ಅಂಬೇಡ್ಕರ್ ಜಾನಪದ ಕ್ರಾಂತಿಯ ಒಂದು ರಾಜಕೀಯ ಪ್ರಣಾಳಿಕೆ ಇದ್ದಂತೆ. ಗಾಂಧಿ ಮತ್ತು ಅಂಬೇಡ್ಕರ್ ಜಾನಪದ ಅಹಿಂಸೆಯ ಜಾನಪದವಾಗಿದೆ. ಜಾನಪದದ ಕ್ರಾಂತಿಯ ಮಹಾಕಾವ್ಯವೆಂದರೆ ಅದೇ ಭಾರತೀಯ ಸಂವಿಧಾನ ಎಂದಿದ್ದಾರೆ.

**ಸಮಾರೋಪ**

**ಜಾನಪದಕ್ಕೆ ತನ್ನದೇ ಆದ ವಿಶಿಷ್ಟತೆ, ಅಗಾಧತೆ, ಅಂತರಾಳದ ಸಂವೇದನೆ ಇದೆ. ಜಾನಪದ ಮೂಲತಃ ಶ್ರಮಸಂಸ್ಕೃತಿಯ ಪ್ರತೀಕ. ಈ ಕಾರಣಗಳಿಂದ ಜಾನಪದ ಆಧುನಿಕ ಸಂದರ್ಭದಲ್ಲಿಯೂ ಪ್ರತಿಯೊಂದು ಕ್ಷೇತ್ರದಲ್ಲಿಯೂ ಕಂಡುಬರುತ್ತದೆ. ಜಾನಪದ ಮನುಷ್ಯನ ಬದುಕಿನ ಅಂತರಂಗದ ಅಭಿವ್ಯಕ್ತಿ. ಜ್ಞಾನ-ವಿಜ್ಞಾನಗಳ ಸಂಗಮ.**ಜನಪದ ಸಾಹಿತ್ಯದಲ್ಲಿ ಈಗೀಗ ಮೌಖಿಕತೆ ಕಡಿಮೆಯಾಗುತ್ತಿದೆ. ಅದರ ಪ್ರತಿಯೊಂದು ಪ್ರಕಾರವನ್ನು ಲಿಖಿತ ರೂಪದಲ್ಲಿ ದಾಖಲಿಸುತ್ತಿದ್ದಾರೆ. ಹಾಗೆಯೇ ದಾಖಲಾದ ಜಾನಪದ ಇತರ ಜ್ಞಾನ ಶಾಖೆಗಳಂತೆ ಎಲ್ಲಾ ಬಗೆಯಿಂದಲೂ ಮಹತ್ವಪೂರ್ಣವಾಗಿದೆ. ಇಡೀ ಜನಪದ ಸಾಹಿತ್ಯ ಶ್ರಮಿಕ ಸಮುದಾಯದೊಳಗೆ ಹಾಸು ಹೊಕ್ಕಾಗಿರುವುದನ್ನು ಗಮನಿಸಬಹುದು. ಜಾನಪದ ಇಂದಿನ ಸಂಸ್ಕೃತಿಯನ್ನು ಮುಟ್ಟಿ ನೋಡುತ್ತಾ, ಮುಂದಿನ ಸಂಸ್ಕೃತಿಯನ್ನು ತನ್ನೊಳಗೆ ಸೇರಿಸಿಕೊಳ್ಳಲು ಕಾದು ನಿಂತಿದೆ.

ಯಾರು ಏನೇ ಹೇಳಿದರೂ, ಜನಪದಕ್ಕೆ ತನ್ನದೇ ಆದ ಮೂಲಭೂತ ಗುಣವಿದೆ. ಇಂದಿನ ದಿನದಲ್ಲಿ ಅದು ತನ್ನ ಅಸ್ತಿತ್ವವನ್ನು ಮೂಲ ರೂಪದಲ್ಲಿ ಉಳಿಸಿಕೊಳ್ಳಲು ಹೆಣಗಾಡುವ ಪರಿಸ್ಥಿತಿ ನಿರ್ಮಾಣವಾಗಿದೆ. ಜಾನಪದದಲ್ಲಿ ಬದಲಾವಣೆ ಆಶಿಸುವವರು, ಶುದ್ಧ ಜಾನಪದ ಉಳಿಸಲು ಹೆಣಗುತ್ತಿದ್ದಾರೆ. ಬಹಳಷ್ಟು ಜನ ನಕಲಿ ಜನಪದ ವಿದ್ವಾಂಸರು ಒಳ್ಳೆಯ ಅವಕಾಶಗಳನ್ನು ಗಿಟ್ಟಿಸುವುದಕ್ಕಾಗಿ ಅವಕಾಶವಾದಿಗಳಾಗುತ್ತಿದ್ದಾರೆ. ಇದು ಸಲ್ಲದು. ನಕಲಿ ಜನಪದರಿಂದ ನಿಜವಾದ ಕಲಾವಿದರ ಹಿತಾಸಕ್ತಿಗೆ ತೀವ್ರದಕ್ಕೆ ಉಂಟಾಗುತ್ತಿದೆ.

ಜಾನಪದ ಕೇವಲ ಶೈಕ್ಷಣಿಕತೆಗೆ ಒಳಗಾಗಿ, ಗ್ರಂಥ ರೂಪದಲ್ಲಿರುವುದಕ್ಕಿಂತ, ಕಲಿತವರಿಗೆ ಅನ್ನದ ಅಕ್ಷರವಾಗಬೇಕು. ಜಾನಪದ ಓದಿದರೆ, ಗ್ರಾಮೀಣ ಸಂಸ್ಕೃತಿಯನ್ನು ಅವಲಂಬಿಸಿದರೆ, ನಾವು ಆತಂಕ ಪಡಬೇಕಾಗಿಲ್ಲ. ನಮಗೆ ಜಾನಪದದಿಂದ ಯಾವುದೇ ಅಪಾಯವಾಗುವುದಿಲ್ಲ ಎಂಬ ಮನಃಸ್ಥಿತಿ ಅವರಿಗೆ ಬರಬೇಕು. ಜಾನಪದ ಓದಿದವರಿಗೆ ಅವಕಾಶಗಳು ಎಲ್ಲಾ ಕಡೆ, ಎಲ್ಲಾ ರೀತಿಯಿಂದಲೂ ಬರಬೇಕು. ಜಾನಪದ ಓದಿದರೆ ಹೇರಳವಾಗಿ ಅವಕಾಶಗಳು ದೊರೆಯುತ್ತವೆ ಎಂಬ ನಂಬಿಕೆಯನ್ನು ಉಂಟು ಮಾಡಿದಾಗ, ಜಾನಪದ ಬಹುಕಾಲ ಉಳಿದು, ಬೆಳೆದು ಸಂಪನ್ನವಾಗುತ್ತದೆ. ಬದಲಾವಣೆಯಲ್ಲೂ ನಿತ್ಯನೂತನವಾಗಿರುತ್ತದೆ.

**ಪರಾಮರ್ಶನ ಗ್ರಂಥಗಳು**


1. ಜಾನಪದ ಸ್ವರೂಪ–ಹಾ.ಮಾ.ನಾಯಕ –1971
2. ಜಾನಪದ ವಿಶ್ವಕೋಶ–ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ–2011
3. ಜಾನಪದ–ದೇಜಗೌ–1983
4. ಆಧುನಿಕ ಜಾನಪದ–ನಾಗಭೂಷಣ್ ಬಗ್ಗನಡು–2016